ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 47 ಡಿವಿಪಿ(2) 2019

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:02-03-2020

## ಸುತ್ತೋಲೆ

ವಿಷಯ: 2020-21ನೇ ಸಾಲಿಗೆ ರಾಜ್ಯದಲ್ಲಿ ಹಾಲಿ ಇರುವ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ, ನವದೆಹಲಿಯ ಎಐಸಿಟಿಇ ಯ ಹಾಗೂ ರಾಜ್ಯ ಸರ್ಕಾರದ ಮಾನ್ಯತೆ ಪಡೆಯುಲು ನಿಗಧಿತ ಅವಧಿಯನ್ನು ವಿಸ್ತರಣೆ ಮಾಡಿರುವ ಬಗ್ಗೆ.

ಉಲ್ಲೇಖ :
1. ನವದೆಹಲಿಯ ಎಐಸಿಟಿಇ ಯ ವೆಬ್ ಪೋರ್ಟಲ್‌ನಲ್ಲಿ ನೀಡಲಾಗಿರುವ ಸಾರ್ವಜನಿಕ ಪ್ರಕಟಣೆ ಸಂಖ್ಯೆ: ಎಡಿವಿಟಿ ನಂ. **ಅಪ್ರೂವಲ್/02(02)/2020.**
2. **ಡಿಟಿಇ 47 ಡಿವಿಪಿ(2) 2019,** ದಿನಾಂಕ:04-02-2020
3. ಎಐಸಿಟಿಇ ಇ-ಮೇಲ್ ದಿನಾಂಕ:02/03/2020.

-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(2) ರ ಸುತ್ತೋಲೆಯ ಪ್ರಕಾರ, 2020-21ನೇ ಸಾಲಿಗೆ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಎಐಸಿಟಿಇಯ ಮಾನ್ಯತೆ ವಿಸ್ತರಣೆ ಪಡೆಯಲು ದಿ:29/02/2020 ಕೊನೆ ದಿನಾಂಕವಾಗಿರುತ್ತದೆ, ಆದರೆ ಕೆಲವು ಸಂಸ್ಥೆಗಳು ಆನ್‌ಲೈನ್ ಮೂಲಕ ನಿಗಧಿತ ದಿನಾಂಕದೊಳಗೆ ಎಐಸಿಟಿಇ ವೆಬ್-ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲವೆಂದು ಕಂಡುಬಂದಿರುತ್ತದೆ.

ಆದ್ದರಿಂದ, ಎಐಸಿಟಿಇಯು ಸದರಿ ಅರ್ಜಿ ಸಲ್ಲಿಕೆಯ ಅವಧಿಯನ್ನು ದಿನಾಂಕ:03/03/2020 @5.00p.m ರವರೆಗೆ ವಿಸ್ತರಿಸಲಾಗಿರುತ್ತದೆ, ಸಂಬಂಧಪಟ್ಟ ಕೆಲವು ಸಂಸ್ಥೆಗಳ ಪ್ರಾಚಾರ್ಯರು ಯಾವುದೇ ಲೋಪದೋಷಗಳಿಗೆ (deficiencies) ಅವಕಾಶವನ್ನು ನೀಡದೇ ಆನ್‌ಲೈನ್ ಅರ್ಜಿಯನ್ನು ಹೆಚ್ಚಿನ ಜವಾಬ್ದಾರಿಯಿಂದ ಸೂಚಿಸಿರುವ ಅವಧಿಯಲ್ಲಿ ಅಪ್‌ಲೋಡ್ ಮಾಡಲು ತಿಳಿಸಲಾಗಿದೆ. ಎಐಸಿಟಿಇಗೆ ಸಲ್ಲಿಸಿದ ಆನ್‌ಲೈನ್ ಅರ್ಜಿಯ ಒಂದು ಹಾರ್ಡ್‌ಕಾಪಿ ಮತ್ತು ಸಾಫ್ಟ್‌ಕಾಪಿಯನ್ನು ತಪ್ಪದೆ ನಿರ್ದೇಶನಾಲಯಕ್ಕೆ ಸಲ್ಲಿಸಬೇಕಾಗಿ ತಿಳಿಸಲಾಗಿದೆ.

ಜಂಟಿನಿರ್ದೇಶಕರು (ಎಟಿಎಸ್)
ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು.

ಇವರಿಗೆ
1. ರಾಜ್ಯದ ಕೆಲವು ಸರ್ಕಾರಿ, ಅನುದಾನಿತ, ಖಾಸಗಿ ಪಾಲಿಟೆಕ್ನಿಕ್‌ಗಳು ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಿನ್ಸಿಪಾಲರುಗಳಿಗೆ.
2. ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ - ನಿರ್ದೇಶನಾಲಯದ ಇ-ಗೌರ್‌ನೆನ್ಸ್ ಸೆಲ್‌ಗೆ.